ಬರೆಯುತ್ತಾರೆ. ಅದರಲ್ಲಿ ಬರುವ ಬರುವ ಒಂದು ಭಾಗ ಗೌರೀಶರ ಜೀವನದೃಷ್ಟಿ ಎಂಥದ್ದು ಎಂಬುದನ್ನು ಸ್ಪಷ್ಟವಾಗಿ ಹೇಳುವಂತಿದೆ.

'ಶ್ರೀರಾಮಚಂದ್ರ ಆದರ್ಶ ಮಹಾಪುರುಷನು ಮಾತ್ರವಲ್ಲ, ಶ್ರೀ ವಿಷ್ಣುವಿನ ಅವತಾರವೇ ಎಂಬ ಶ್ರದ್ಧೆ ಭಕ್ತಿಗಳಿಂದ ಸಮನ್ವಿತವಾದ ಭೂಮಿಕೆ ನನ್ನದಲ್ಲ. ನಾನೊಬ್ಬ ಪರಮ ನಾಸ್ತಿಕ. ಧರ್ಮಾಧರ್ಮ ಪಾಪಪುಣ್ಯಗಳ ಸೂಕ್ಷ್ಮಕ್ಕಿಂತ ಆದಿಕವಿಯ ಮಾನಸಸೃಷ್ಟಿಯ ವಾಕ್ಯ (ಕಾವ್ಯ) ಸತ್ಯವೇ ನನಗೆ ಈ ವಿಚಾರದಲ್ಲಿ ಮುಖ್ಯ. ಹಾಗೂ ಪ್ರಸ್ತುತ ವಿಷಯಕ್ಕೆ ನನಗೆ ವಾಲ್ಮೀಕಿಯೊಬ್ಬನೇ ಆಧಾರ. ಆತ ರೂಪಿಸಿದ ಶ್ರೀರಾಮನ ವ್ಯಕ್ತಿಚಿತ್ರವೇ ಅದಕ್ಕೆ ಆಶ್ರಯ. ಅವತಾರವೆಂದು ಆರಾಧಿಸಲಿ, ಮಹಾಪುರುಷನೆಂದು ಮನಸ್ಸಿನಲಿ ಅಥವಾ ಮಾಹಾಕಾವ್ಯದ ನಾಯಕ ಪಾತ್ರವೆಂದು ಮೆಚ್ಚಲಿ - ನಾವು ರಾಮನನ್ನು ಹೇಗೆ ಕಂಡರೂ ಆದಿಯಲ್ಲಿಯೂ, ಅಂತ್ಯದಲ್ಲಿಯೂ (ಮಧ್ಯದಲ್ಲಿಯೂ ಕೂಡ!) ಆತ ವಾಲ್ಮೀಕಿಯ ಸೃಷ್ಟಿ! ಶ್ರೀರಾಮ ಮೂಲತಃ ಐತಿಹಾಸಿಕವಾಗಿ ಹೇಗಿದ್ದನೋ ಯಾರು ಬಲ್ಲರು! ಶ್ರೀರಾಮನಂಥವರು, ಅವನಿಗಿಂತಲೂ ಮಿಗಿಲಾಗಿರುವವರು ಇದ್ದಿರಲೂಬಹುದು. ಆದರೆ ನಾವು ಶತಶತಮಾನಗಳಿಂದಲೂ ಶ್ರದ್ಧಾಭಕ್ತಿಗಳಿಂದ ಕಂಡು ಕೊಂಡಾಡುತ್ತ ಬಂದ ರಾಮ, ವಾಲ್ಮೀಕಿಯ ಮಹಾಕಾವ್ಯದಲ್ಲಿ ಕೆತ್ತಿ ಕಡೆದು ನಿಲ್ಲಿಸಿದ ಶಿಲ್ಪಕೃತಿ! ಆದ್ದರಿಂದಲೇ ನಾನು ಶ್ರೀರಾಮನ ವಿಷಯವಾಗಿ ಶಂಕೆ ಎತ್ತಿದಾಗ ಅದರ ನೈತಿಕ ಹೊಣೆ ವಾಲ್ಮೀಕಿಯ ಮೇಲೆ ಬಿಟ್ಟಿದ್ದು. ಶ್ರೀರಾಮ ತಪ್ಪಿದರೆ ಅದು ವಾಲ್ಮೀಕಿ ತೂಕಡಿಸಿದುದರ ಪರಿಣಾಮ! ಅದು ರಾಮನ ಅಪರಾಧವಲ್ಲ- ಸಹೃದಯರ ದೃಷ್ಟಿಯಿಂದ; ಅವನನ್ನು ರೂಪಿಸಿದ ಆ ಆದಿಕವಿಯ ಅಜಾಗರೂಕತೆಯೋ, ಪ್ರಮಾದವೋ ಇನ್ನೇನೋ ಎಂಬುವುದು ನನ್ನ ನಿಲುಮೆ'.

ಹೀಗೆ ತಾವೇ ಆದಿಕವಿ ಎಂದು ಉಲ್ಲೇಖಿಸುವ ಗೌರೀಶರು, ಅವನು ಆದಿಕವಿ ಆಗಿರಲಿಕ್ಕಿಲ್ಲ ಎಂಬುದರ ಕುರಿತೂ ಒಂದು ಲೇಖನ ಬರೆದಿದ್ದಾರೆ! ಮಹಾಭಾರತದಲ್ಲಿ ದ್ರೌಪದಿಗೆ ಕೃಷ್ಣ ವಸ್ತ್ರದಾನ ಮಾಡಿದ್ದೇ ಸಂಶಯಾಸ್ಪದ ಎನ್ನುವ ಅವರು, ದುಃಶ್ಯಾಸನನನ್ನು ಸಮರ್ಥಿಸಿಕೊಳ್ಳಲೇನೂ ಹೋಗುವುದಿಲ್ಲ. ಮಹಾಭಾರತದಲ್ಲಿ ಭಗವದ್ಗೀತೆ ಒಂದು ಪ್ರಕ್ಷಿಪ್ತ ಭಾಗ ಎಂಬ ಸಂಶಯ ವ್ಯಕ್ತಪಡಿಸುವ ಅವರು ಭಗವದ್ಗೀತೆಯ ಕೃತಿಮೌಲ್ಯದ ಬಗ್ಗೆ, ಅದರ ಕಾವ್ಯಾತ್ಮಕ ಶ್ರೇಷ್ಠತೆಯ ಬಗ್ಗೆ ಯಾವ ಸಂಶಯವೂ ಇಲ್ಲದೆ ಪ್ರಶಂಸಿಸುತ್ತಾರೆ. ಇದು ಗೌರೀಶರು ಬದುಕನ್ನು, ನಮ್ಮ ಬದುಕಲ್ಲಿ ಹಾಸುಹೊಕ್ಕಾಗಿರುವ ಪುರಾಣಪ್ರಣೀತ ಮೌಲ್ಯಗಳನ್ನು ನೋಡುವ ದೃಷ್ಟಿಕೋನ.

ಹೀಗೆ ಮೂಲಕ್ಕೆ ಹೋಗಿ ನೋಡುವ, ಸ್ಥಾಪಿತವಾಗಿದ್ದನ್ನು ಕುರುಡಾಗಿ ಅನುಸರಿಸದೇ ಪರೀಕ್ಷಿಸಿ, ನಮ್ಮ ಈ ಕಾಲಕ್ಕೆ, ಈಗಿನ ಬದುಕಿನ ಮಾದರಿಗೆ ಒಗ್ಗುವಂತೆ ಪುನರ್‌ನಿರ್ಮಿಸಿಕೊಳ್ಳುವ ಬಹುದೊಡ್ಡ ಯಜ್ಞಕಾರ್ಯವನ್ನು ತಮ್ಮ ಬದುಕಿನುದ್ದಕ್ಕೂ ಗೌರೀಶ ಕಾಯ್ಕಿಣಿ ಅವರು ಮಾಡುತ್ತಲೇ ಹೋಗಿದ್ದಾರೆ ಎಂಬುದಕ್ಕೆ ಪುರಾವೆಯಾಗಿ ಅವರ ಒಂದೊಂದು ಬರಹಗಳೂ ಇವೆ.

'ಕನ್ನಡ ಪುಸ್ತಕ ಪ್ರಾಧಿಕಾರ' ಪ್ರಕಟಿಸಿರುವ ಮೂರು ಸಂಪುಟಗಳಲ್ಲಿ ಎರಡನೇ ಸಂಪುಟ 'ಗಾಳಿಚಿಟ್ಟೆ'ಯಲ್ಲಿ ಅವರ ಕವನಗಳು, ರಂಗಗೀತಗಳು, ಗುಮಟೆ ಪಾಂಗಿನ ಹಾಡುಗಳು, ರೂಪಕ-ನಾಟಕಗಳು, ಬಾನುಲಿ ನಾಟಕಗಳು, ಆಖ್ಯಾಯಿಕೆಗಳು, ಒಂದೇ ಒಂದು ಕಥೆ, ವ್ಯಕ್ತಿಚಿತ್ರಗಳು ಇವೆ. ಮೂರನೇ ಸಂಪುಟ 'ಒರೆಗಲ್ಲು'ವಿನಲ್ಲಿ ಅವರ ವೈಚಾರಿಗಳ ಬರಹಗಳಿವೆ. ಇವುಗಳಿಗೆ ಎಂ.ಜಿ. ಹೆಗಡೆ ಅಷ್ಟೇ ಸೂಕ್ತವಾದ ಪ್ರವೇಶಿಕೆ ಒದಗಿಸುವಂಥ ಮುನ್ನುಡಿಯನ್ನೂ ಬರೆದಿದ್ದಾರೆ. ಈ ಮೂರೂ ಸಂಪುಟಗಳೂ ಪ್ರತ್ಯೇಕವಾಗಿಯೇ ವಿಶ್ಲೇಷಿಸಬೇಕಾದಷ್ಟು ಗಾಢವೂ ಆಳವೂ ಆದ ಬರಹಗಳನ್ನು ಒಳಗೊಂಡಿವೆ. ಆದರೆ ಅವೆಲ್ಲದರ ಹಿಂದಿನ ಗೌರೀಶರ ಜೀವನದೃಷ್ಟಿ ಒಂದೇ ಆಗಿದೆ. ಅವರು, ನಕ್ಷೆ ಹಿಡಿದು ನಕ್ಷತ್ರಲೋಕಕ್ಕಾಗಿ ತಡಕಾಡುವವರಲ್ಲ. ತೊಂಡು ಮೇವರಿಗೆ ಹಾದಿ ಕೇಳುತ್ತ ತಡವರಿಸುವವರಲ್ಲ. ನೇರವಾಗಿ ದುರ್ಗಕ್ಕೆ ಹತ್ತುವ ಧೀಮಂತ ವ್ಯಕ್ತಿತ್ವದವರು. ಅವರ ಈ ವೈಚಾರಿಕ ದೃಷ್ಟಿಕೋನ, ಹಲವು ಕಾರಣಗಳಿಂದ ದೃಷ್ಟಿಮಂದಗೊಂಡಿರುವ ಈ ಕಾಲಕ್ಕೆ ಎಷ್ಟು ಅಗತ್ಯವಾದದ್ದು ಎಂಬುದನ್ನು ಪ್ರತ್ಯೇಕವಾಗಿ ಹೇಳಬೇಕಿಲ್ಲ. ●